## ಕರ್ನಾಟಕ ಸರ್ಕಾರ

ಸಂಖ್ಯೆ: ಆನಾಸ 223 ಇಭತ19(ಇ-ಆಫೀಸ್)

ಕರ್ನಾಟಕ ಸರ್ಕಾರದ ಸಚಿವಾಲಯ,
ವಿಕಾಸ ಸೌಧ,
ಬೆಂಗಳೂರು, ದಿನಾಂಕ:10.12.2020

## ಅಧಿಸೂಚನೆ

ವಿಷಯ:- ತೂಕಗಳು, ಅಳತೆಗಳು, ತೂಕ ಮತ್ತು ಅಳತೆ ಸಾಧನಗಳ ಹೊಸ ದುರಸ್ತಿ, ಮಾರಾಟ ಮತ್ತು ತಯಾರಿಕಾ ಲೈಸನ್ಸ್ ಗಳನ್ನು ನೀಡುವ ಬಗ್ಗೆ ಸೂಚನೆಗಳು

ಉಲ್ಲೇಖ 1. ಕಾನೂನು ಮಾಪನಶಾಸ್ತ್ರ ಇಲಾಖೆಯ ಸುತ್ತೋಲೆ ಸಂ.ಕಾಮಾಇ/ಸನಿತಾ/ಸಿಆರ್-72/09-10 ದಿನಾಂಕ: 01.03.2010

2. ಕಾನೂನು ಮಾಪನಶಾಸ್ತ್ರ ಇಲಾಖೆಯ ಸುತ್ತೋಲೆ ಸಂಖ್ಯೆ: ಕಾಮಾಇ/ಸನಿತಾ/ಸಿಆರ್-38/2018-19 ದಿನಾಂಕ: 10.09.2018

****

ತೂಕಗಳು, ಅಳತೆಗಳು ಹಾಗೂ ತೂಕ ಮತ್ತು ಅಳತೆ ಸಾಧನಗಳ ದುರಸ್ತಿ ನಿರ್ವಹಿಸಲಿಚ್ಛಿಸುವ ಮತ್ತು ನಿಗಧಿತ ವಿದ್ಯಾರ್ಹತೆ ಹೊಂದಿರುವ ಅಭ್ಯರ್ಥಿಗಳಿಗೆ ಸ್ಕಿಲ್ಡ್ ವರ್ಕರ್ ಪ್ರಮಾಣ ಪತ್ರ ಮತ್ತು ದುರಸ್ಥಿ ಲೈಸನ್ಸ್ ಪಡೆಯುವ ವಿಧಿ ವಿಧಾನಗಳನ್ನು ಉಲ್ಲೇಖಿತ-1ರ ಸುತ್ತೋಲೆಯಲ್ಲಿ ತಿಳಿಸಲಾಗಿತ್ತು. ನಂತರ ಸದರಿ ಸುತ್ತೋಲೆಯನ್ನು ಹಿಂಪಡೆದು ಉಲ್ಲೇಖ-2ರ ಸುತ್ತೋಲೆಯನ್ನು ಹೊರಡಿಸಲಾಗಿದೆ. ಉಲ್ಲೇಖ-2ರ ಸುತ್ತೋಲೆಗೆ ಸಂಬಂಧಿಸಿದಂತೆ ಕೆಲವು ಮಾರ್ಪಾಡುಗಳನ್ನು ಮಾಡುವುದು ಅತ್ಯವಶ್ಯಕವಾಗಿದ್ದು ಸದರಿ ಕಾರಣಕ್ಕಾಗಿ ಈ ಹಿಂದೆ ಹೊರಡಿಸಲಾಗಿದ್ದ ಎಲ್ಲಾ ಸುತ್ತೋಲೆಗಳನ್ನು ಹಿಂಪಡೆದು ಈ ಅಧಿಸೂಚನೆಗಳನ್ನು ತಕ್ಷಣದಿಂದ ಜಾರಿಗೆ ಬರುವಂತೆ ಹೊರಡಿಸಲಾಗಿದೆ.

1. ಹೊಸ ದುರಸ್ಥಿ/ಮಾರಾಟ/ತಯಾರಿಕಾ ಅನುಜ್ಞಾ ಪತ್ರಗಳನ್ನು ಪಡೆಯಲು ಇಚ್ಛಿಸುವ ಅಭ್ಯರ್ಥಿಗಳ ವಯೋಮಿತಿ 18 ರಿಂದ 45 ವರ್ಷಗಳವರೆಗೆ ಮಾತ್ರ ಇರತಕ್ಕದ್ದು.

2. ತೂಕಗಳು, ಅಳತೆಗಳು ಹಾಗೂ ತೂಕ ಮತ್ತು ಅಳತೆ ಸಾಧನಗಳ ದುರಸ್ಥಿ ಅನುಜ್ಞಾ ಪತ್ರ ಪಡೆಯಲು ದಿನಾಂಕ: 10.09.2018ರ ಸುತ್ತೋಲೆಯ ಪ್ರಕಾರ ಸ್ಕಿಲ್ಡ್ ವರ್ಕರ್ ಪ್ರಮಾಣ ಪತ್ರಗಳ ಆಧಾರದ ಮೇಲೆ ಅನುಜ್ಞಾ ಪತ್ರಗಳನ್ನು ನೀಡುವುದನ್ನು ನಿಲ್ಲಿಸಲಾಗಿತ್ತು ಮತ್ತು ಅರ್ಹತಾದಾಯಕ ವಿದ್ಯಾರ್ಹತೆ ಕಡ್ಡಾಯವಾಗಿ ನಿಗಧಿಪಡಿಸಿ ಅದರಂತೆ ಇಲ್ಲಿಯವರೆಗೂ ಅನುಜ್ಞಾ ಪತ್ರ ನೀಡಲಾಗುತ್ತಿದೆ. ಇದನ್ನು ಸದ್ಯ ಕೆಲವು ಮಾರ್ಪಾಡುಗಳೊಂದಿಗೆ ತಕ್ಷಣದಿಂದ ಜಾರಿಗೆ ಬರುವಂತೆ ಸ್ಕಿಲ್ಡ್ ಇಂಡಿಯಾ ಪ್ರೋಗ್ರಾಮ್ ಇವರಿಂದ ಸ್ಕಿಲ್ಡ್ ಪ್ರಮಾಣ ಪತ್ರವನ್ನು ಹೊಂದಿರುವುದ ಜೊತೆಗೆ ಅರ್ಜಿದಾರರ ವಿದ್ಯಾರ್ಹತೆಗನುಗುಣವಾಗಿ ದುರಸ್ಥಿ ಅನುಜ್ಞಾ ಪತ್ರಗಳನ್ನು ಕೊಡಲು ತೀರ್ಮಾನಿಸಲಾಗಿದ್ದು, ಅರ್ಜಿದಾರರ ವಿದ್ಯಾರ್ಹತೆಯನ್ನು ಈ ಕೆಳಗಿನಂತೆ ನಿಗಧಿಪಡಿಸಲಾಗಿದೆ.

761
15/12/2020

Circulated to all LMOs
10/12

| ಕ್ರ ಸಂ | ವಿವರ | ವಿದ್ಯಾರ್ಹತೆ |
|---|---|---|
| 1 | ತೂಕಗಳು, ಅಳತೆಗಳು, ಮೆಕ್ಯಾನಿಕಲ್ ತೂಕದ ಸಾಧನಗಳು, ಮೆಕ್ಯಾನಿಲಕ್ ಆಟೋ ಮತ್ತು ಟ್ಯಾಕ್ಸಿ ಮೀಟರ್ ಗಳು | ಕನಿಷ್ಠ 10ನೇ ತರಗತಿಯಲ್ಲಿ ಉತ್ತೀರ್ಣರಾಗಿರಬೇಕು. |
| 2 | ವಿದ್ಯುನ್ಮಾನ ತೂಕದ ಯಂತ್ರಗಳು ಹಾಗೂ ಅಳತೆ ಸಾಧನಗಳು, ವೇಬ್ರಿಡ್ಜ್( ಮೆಕ್ಯಾನಿಕಲ್ ಹಾಗು ಎಲೆಕ್ಟ್ರಾನಿಕ್), ವಿದ್ಯುನ್ಮಾನ ಆಟೋ ಮತ್ತು ಟ್ಯಾಕ್ಸಿ ಮೀಟರ್ ಗಳು, ಸ್ಟೋರೇಜ್ ಟ್ಯಾಂಕ್ ಗಳು, ಡಿಸ್ಪೆಂನ್ಸಿಂಗ್ ಪಂಪುಗಳು. | ಐ.ಟಿ.ಐ. , ಡಿಪ್ಲೊಮ, ಬಿ.ಇ. ಅಥವಾ ಬಿ.ಎಸ್.ಸಿ. ಪದವಿಗಳಲ್ಲಿ ಉತ್ತೀರ್ಣರಾಗಿರಬೇಕು. |

3. ನಿಗಧಿಪಡಿಸಿದ ವಿದ್ಯಾರ್ಹತೆಯಿರುವ ಅಭ್ಯರ್ಥಿಗಳು ದುರಸ್ತಿ ಲೈಸನ್ಸಿಗಾಗಿ ಇಲಾಖಾ ವೆಬ್ ಸೈಟ್ www.emapan.karnataka.gov.in ನಲ್ಲಿ ಆನ್ ಲೈನ್ ಅರ್ಜಿಯನ್ನು ನೇರವಾಗಿ ಸಲ್ಲಿಸಬೇಕು.

4. ದುರಸ್ತಿದಾರರು ವಿವಿದ ಸಾಧನಗಳ ದುರಸ್ತಿಗಾಗಿ ಹೊಂದಿರಬೇಕಾದ ಪರೀಕ್ಷಾ ಸಾಧನಗಳು ಹಾಗೂ ಉಪಕರಣಗಳನ್ನು ಅನುಬಂಧ-1 ಹಾಗೂ ಅನುಬಂಧ-2ರಲ್ಲಿ ತಿಳಿಸಲಾಗಿದೆ. ದುರಸ್ತಿದಾರರು ಸಾಲದ ವಸ್ತುಗಳನ್ನು ಹೊಂದಿರಬೇಕಾದ ಷರತ್ತನ್ನು ಕೈಬಿಡಲಾಗಿದೆ.

5. ದುರಸ್ತಿದಾರರು/ಮಾರಾಟಗಾರರು/ತಯಾರಕರ ಅನುಜ್ಞಾ ಪತ್ರಗಳನ್ನು ಪಡೆಯಲು ಅರ್ಜಿದಾರರು ಆನ್‌ಲೈನ್ ಮೂಲಕ ಅರ್ಜಿಯನ್ನು ಸಲ್ಲಿಸಿದಾಗ, ಕಂಪ್ಯೂಟರ್ ರಾಂಡಮ್ ಅಲೋಕೇಷನ್‌ನಿಂದ ಸದರಿ ಆನ್‌ಲೈನ್ ಅರ್ಜಿಯನ್ನು ಸ್ವೀಕರಿಸಿದ ಲೀಗಲ್ ಮೆಟ್ರಾಲಜಿ ಅಧಿಕಾರಿಯು, ಅರ್ಜಿದಾರರು ಅರ್ಜಿಯಲ್ಲಿ ತಿಳಿಸಿರುವ ದುರಸ್ತಿ ಕಾರ್ಯಾಗಾರ/ಮಾರಾಟ ಸ್ಥಳ/ತಯಾರಿಕಾ ಘಟಕದ ತಪಾಸಣೆ ಕೈಗೊಂಡು, ಅರ್ಜಿದಾರರು ಅಪ್‌ಲೋಡ್ ಮಾಡಿರುವ ದಾಖಲೆಗಳನ್ನು ಪರಿಶೀಲಿಸಿ, ಆನ್‌ಲೈನ್ ಟಿಪ್ಪಣಿಯಲ್ಲಿ ಷರಾ ದಾಖಲಿಸಿ, ಪ್ರಸ್ತಾವನೆಯು ಪರಿಪೂರ್ಣವಾಗಿದ್ದಲ್ಲಿ ಮಾತ್ರ ಅರ್ಜಿದಾರರಿಂದ ಶುಲ್ಕ ಸಂದಾಯ ಮಾಡಿಸಿಕೊಂಡು (ಶುಲ್ಕದ ವಿವರ ಅನುಬಂಧ-3ರಲ್ಲಿ ಲಗತ್ತಿಸಿದೆ) ಪಾವತಿಸಿದ ರಶೀದಿ ಹಾಗೂ ಅಭ್ಯರ್ಥಿ/ಅಭ್ಯರ್ಥಿಗಳ ಮಾದರಿ ಸಹಿಗಳನ್ನು ಪಡೆದು, ದೃಢೀಕರಿಸಿ ಅಪ್ರೂವ್ ಮಾಡಿ ಮುಂದಿನ ಕಛೇರಿಗೆ ಫಾರ್ವರ್ಡ್ ಮಾಡುವುದು. ಒಂದು ವೇಳೆ ಪ್ರಸ್ತಾವನೆಯು ಅಪೂರ್ಣವಾಗಿದ್ದು, ಅರ್ಜಿದಾರರು ಅಗತ್ಯ ದಾಖಲೆಗಳನ್ನು ಸಲ್ಲಿಸಲು ವಿಫಲರಾದಲ್ಲಿ ಸದರಿ ಅರ್ಜಿಯಲ್ಲಿ ಏನೇನು ಲೋಪದೋಷಗಳಿವೆಯೆಂದು ಪರಿಶೀಲಿಸಿ ಸದರಿ ಮಾಹಿತಿಯನ್ನು ಫೈಲ್ ನೋಟಿಂಗ್‌ನಲ್ಲಿ ದಾಖಲಿಸಿ ಮುಂದಿನ ಕಛೇರಿಗೆ ಫಾರ್ವರ್ಡ್ ಮಾಡುವುದು.

6. ಹೊಸ ದುರಸ್ತಿ/ಮಾರಾಟ/ತಯಾರಿಕಾ ಅನುಜ್ಞಾ ಪತ್ರಗಳನ್ನು ಪಡೆಯಲು ಅರ್ಜಿದಾರರು ಆನ್-ಲೈನ್ ಅರ್ಜಿಯನ್ನು ಸಲ್ಲಿಸುವಾಗ ಅಪ್‌ಲೋಡ್ ಮಾಡಬೇಕಾದ ಅಗತ್ಯ ದಾಖಲೆಗಳು ಈ ಕೆಳಗಿನಂತಿವೆ.

ಅ) ಹೊಸ ದುರಸ್ತಿ ಲೈಸನ್ಸ್‌ಗಾಗಿ ಅರ್ಜಿದಾರರು ಅಪ್ ಲೋಡ್ ಮಾಡಬೇಕಾದ ದಾಖಲೆಗಳು:

1) ಅಭ್ಯರ್ಥಿ/ಅಭ್ಯರ್ಥಿಗಳ ಖಾಯಂ ವಾಸಸ್ಥಳದ ದೃಢೀಕರಣ ಪತ್ರ.( ಆಧಾರ್ ಕಾರ್ಡ್/ರೇಷನ್ ಕಾರ್ಡ್/ಪಾಸ್ ಪೋರ್ಟ್/ಕಂದಾಯ ರಶೀದಿ/ಎಲೆಕ್ಟ್ರಿಕಲ್ ಬಿಲ್ (ಇವುಗಳಲ್ಲಿ ಯಾವುದಾದರೂ ಒಂದು)

2) ಅಭ್ಯರ್ಥಿ/ಸಂಸ್ಥೆಯ ಜಿ.ಎಸ್.ಟಿ. ನೋಂದಣಿ ಪ್ರಮಾಣ ಪತ್ರ.

3) ಅಭ್ಯರ್ಥಿ/ಅಭ್ಯರ್ಥಿಗಳ/ಸಂಸ್ಥೆಯ ಪ್ಯಾನ್ ಕಾರ್ಡ್.

4) ದುರಸ್ತಿ ಕಾರ್ಯಗಾರಕ್ಕೆ ಸಂಬಂಧಿಸಿದ ಬಾಡಿಗೆ ಕರಾರು ಪತ್ರ/ಲೀಸ್ ಒಡಂಬಡಿಕೆ ಪತ್ರ/ಸ್ವಂತ ಕಟ್ಟಡವಾಗಿದ್ದರೆ ತೆರಿಗೆ ಸಂದಾಯ ಪತ್ರ.

5) ಪಾಲುದಾರಿಕೆ ಸಂಸ್ಥೆಯಾಗಿದ್ದಲ್ಲಿ ಪಾಲುದಾರಿಕೆ ಪತ್ರ.

6) ಕಂಪನಿಯಾಗಿದ್ದಲ್ಲಿ ಮೆಮೊರಾಂಡಮ್ ಆಫ್ ಆರ್ಟಿಕಲ್ಸ್.

7) ಅಭ್ಯರ್ಥಿ/ಅಭ್ಯರ್ಥಿಗಳ ವಿದ್ಯಾರ್ಹತೆ ಪ್ರಮಾಣ ಪತ್ರ.

8) ಅರ್ಜಿದಾರರ ಮಾದರಿ ಸಹಿಗಳು.

9) ಪರೀಕ್ಷಾರ್ಥ ಸಾಧನಗಳ ಸತ್ಯಾಪನಾ ಪ್ರಮಾಣ ಪತ್ರ.

10) ಉಪಕರಣಗಳ ಪಟ್ಟಿ.

ಆ) ಹೊಸ ಮಾರಾಟಗಾರರ ಲೈಸನ್ಸ್‌ಗಾಗಿ ಅರ್ಜಿದಾರರು ಅಪ್ ಲೋಡ್ ಮಾಡಬೇಕಾದ ದಾಖಲೆಗಳು:

1) ಅಭ್ಯರ್ಥಿ/ಅಭ್ಯರ್ಥಿಗಳ ಖಾಯಂ ವಾಸಸ್ಥಳದ ಧೃಡೀಕರಣ ಪತ್ರ.( ಆಧಾರ್ ಕಾರ್ಡ್/ರೇಷನ್ ಕಾರ್ಡ್/ಪಾಸ್‌ಪೋರ್ಟ್/ಕಂದಾಯ ರಶೀದಿ/ಎಲೆಕ್ಟ್ರಿಕಲ್ ಬಿಲ್ (ಇವುಗಳಲ್ಲಿ ಯಾವುದಾದರೂ ಒಂದು)

2) ಅಭ್ಯರ್ಥಿ/ಸಂಸ್ಥೆಯ ಜಿ.ಎಸ್.ಟಿ. ನೋಂದಣಿ ಪ್ರಮಾಣ ಪತ್ರ.

3) ಅಭ್ಯರ್ಥಿ/ಅಭ್ಯರ್ಥಿಗಳ/ಸಂಸ್ಥೆಯ ಪ್ಯಾನ್ ಕಾರ್ಡ್

4) ಮಾರಾಟ ಸ್ಥಳಕ್ಕೆ ಸಂಬಂಧಿಸಿದ ಬಾಡಿಗೆ ಕರಾರು ಪತ್ರ/ಲೀಸ್ ಒಡಂಬಡಿಕೆ ಪತ್ರ/ಸ್ವಂತ ಕಟ್ಟಡವಾಗಿದ್ದಲ್ಲಿ ತೆರಿಗೆ ಸಂದಾಯ ಪತ್ರ

5) ಪಾಲುದಾರಿಕೆ ಸಂಸ್ಥೆಯಾಗಿದ್ದಲ್ಲಿ ಪಾಲುದಾರಿಕೆ ಪತ್ರ.

6) ಕಂಪನಿಯಾಗಿದ್ದಲ್ಲಿ ಮೆಮೊರಾಂಡಂ ಆಫ್ ಆರ್ಟಿಕಲ್ಸ್.

7) ಅರ್ಜಿದಾರರ ಮಾದರಿ ಸಹಿಗಳು.

ಇ) ಹೊಸ ತಯಾರಕರ ಲೈಸನ್ಸ್‌ಗಾಗಿ ಅರ್ಜಿದಾರರು ಅಪ್ ಲೋಡ್ ಮಾಡಬೇಕಾದ ದಾಖಲೆಗಳು:

1) ಅಭ್ಯರ್ಥಿ/ಅಭ್ಯರ್ಥಿಗಳ ಖಾಯಂ ವಾಸಸ್ಥಳದ ಧೃಡೀಕರಣ ಪತ್ರ.( ಆಧಾರ್ ಕಾರ್ಡ್/ರೇಷನ್ ಕಾರ್ಡ್/ಪಾಸ್‌ಪೋರ್ಟ್/ಕಂದಾಯ ರಶೀದಿ/ಎಲೆಕ್ಟ್ರಿಕಲ್ ಬಿಲ್ (ಇವುಗಳಲ್ಲಿ ಯಾವುದಾದರೂ ಒಂದು)

2) ಅಭ್ಯರ್ಥಿ/ಸಂಸ್ಥೆಯ ಜಿ.ಎಸ್.ಟಿ. ನೋಂದಣಿ ಪ್ರಮಾಣ ಪತ್ರ.

3) ಅಭ್ಯರ್ಥಿ/ಅಭ್ಯರ್ಥಿಗಳ/ಸಂಸ್ಥೆಯ ಪ್ಯಾನ್ ಕಾರ್ಡ್.

4) ತಯಾರಿಕಾ ಸ್ಥಳಕ್ಕೆ ಸಂಬಂಧಿಸಿದ ಬಾಡಿಗೆ ಕರಾರು ಪತ್ರ/ಲೀಸ್ ಒಡಂಬಡಿಕೆ ಪತ್ರ/ಸ್ವಂತ ಕಟ್ಟಡವಾಗಿದ್ದರೆ ತೆರಿಗೆ ಸಂದಾಯ ಪತ್ರ.

5) ಕೇಂದ್ರ ಸರ್ಕಾರದಿಂದ ಪಡೆದಿರುವ ಮಾದರಿ ಅನುಮೋದನೆ (ಅಪ್ರೂವಲ್ ಆಫ್ ಮಾಡೆಲ್) ಪತ್ರ.

) ಪಾಲುದಾರಿಕೆ ಸಂಸ್ಥೆಯಾಗಿದ್ದಲ್ಲಿ ಪಾಲುದಾರಿಕೆ ಪತ್ರ.

ಕಂಪನಿಯಾಗಿದ್ದಲ್ಲಿ ಮೆಮೊರಾಂಡಂ ಆಫ್ ಆರ್ಟಿಕಲ್ಸ್.

ಜಿದಾರರ ಮಾದರಿ ಸಹಿಗಳು.

7) ಹೊಸ ಲೈಸನ್ಸ್ ಪಡೆಯಲು ವಯೋಮಿತಿ ನಿಗಧಿಪಡಿಸಲಾಗಿದ್ದು, ಹಾಲಿ ದುರಸ್ತಿ ಲೈಸನ್ಸ್ ಹೊಂದಿರುವ ಲೈಸನ್ಸ್‌ದಾರರ ವಯೋಮಿತಿ 60 ವರ್ಷಗಳು ಮೀರಿದ್ದಲ್ಲಿ ಅವರುಗಳು ಪ್ರತಿ ವರ್ಷ ಲೈಸನ್ಸ್‌ಗಳನ್ನು ನವೀಕರಣಕ್ಕೆ ಸಲ್ಲಿಸುವ ಸಮಯದಲ್ಲಿ ಸರ್ಕಾರಿ ವೈದ್ಯಾಧಿಕಾರಿಗಳಿಂದ ಆರೋಗ್ಯದ ಬಗ್ಗೆ ಫಿಟ್‌ನೆಸ್ ಸರ್ಟಿಫಿಕೇಟ್ ಪಡೆದು ಹಾಜರುಪಡಿಸುವುದು ಕಡ್ಡಾಯವಾಗಿದೆ.

8) ದುರಸ್ತಿದಾರರು/ಮಾರಾಟಗಾರರು/ತಯಾರಕರುಗಳ ಅನುಜ್ಞಾ ಪತ್ರ ನವೀಕರಣಕ್ಕಾಗಿ ಸಲ್ಲಿಸುವ ಎಲ್ಲಾ ನವೀಕರಣ ಪ್ರಸ್ತಾವನೆಗಳನ್ನು ಇನ್ನು ಮುಂದೆ ನಿಯಂತ್ರಕರು ಅಥವಾ ನಿಯಂತ್ರಕರಿಂದ ಅಧಿಕಾರ ಪ್ರತ್ಯಾಯೋಜನೆ ಪಡೆದವರು ನಿಯಮಾನುಸಾರ ನವೀಕರಿಸಬಹುದಾಗಿರುತ್ತದೆ.

9) ಎಲ್ಲಾ ಅರ್ಜಿಗಳು ಆನ್-ಲೈನ್‌ನಲ್ಲಿ ದಾಖಲಾಗಿ ಸಕಾಲದಡಿಯಲ್ಲಿ ಸಮನ್ವಯಗೊಂಡಿರುವುದರಿಂದ ಸುತ್ತೋಲೆಯಲ್ಲಿ ತಿಳಿಸಿರುವ ಅಂಶಗಳನ್ನು ಗಮನದಲ್ಲಿಟ್ಟುಕೊಂಡು ಅರ್ಜಿಯನ್ನು ವಿಲೇವಾರಿ ಮಾಡಲು ಸೂಚಿಸಿದೆ ಹಾಗೂ ಈ ಸಂಬಂಧ ಅನಗತ್ಯ ಪತ್ರ ವ್ಯವಹಾರ ಮಾಡಬಾರದಾಗಿ ಸೂಚಿಸಿದೆ

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ,

10/12/2020
(ಬಿ.ಕೆ. ದೇವಯ್ಯ)
ಸರ್ಕಾರದ ಅಧೀನ ಕಾರ್ಯದರ್ಶಿ,
ಆಹಾರ, ನಾಗರಿಕ ಸರಬರಾಜು, ಗ್ರಾಹಕರ ವ್ಯವಹಾರಗಳ
ಹಾಗೂ ಕಾನೂನು ಮಾಪನಶಾಸ್ತ್ರ ಇಲಾಖೆ.
10/12

ಗೆ:

1) ನಿಯಂತ್ರಕರು, ಕಾನೂನು ಮಾಪನ ಶಾಸ್ತ್ರ ಇಲಾಖೆ, ಬೆಂಗಳೂರು
2) ಸಹಾಯಕ ನಿಯಂತ್ರಕರು / ನಿರೀಕ್ಷಕರು/ ಕಾನೂನು ಮಾಪನಶಾಸ್ತ್ರ ಇಲಾಖೆ, (ನಿಯಂತ್ರಕರು, ಕಾನೂನು ಮಾಪನಶಾಸ್ತ್ರ ಇಲಾಖೆ ಇವರ ಮುಖಾಂತರ).
3) ಆಹಾರ ನಾಗರಿಕ ಸರಬರಾಜು ಮತ್ತು ಗ್ರಾಹಕರ ವ್ಯವಹಾರಗಳ ಹಾಗೂ ಕಾನೂನು ಮಾಪನಶಾಸ್ತ್ರ ಇಲಾಖೆಯವರ ಸಚಿವರ ಆಪ್ತ ಕಾರ್ಯದರ್ಶಿಯವರಿಗೆ, ವಿಧಾನಸೌಧ.
4) ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಯವರ ಆಪ್ತ ಸಹಾಯಕರು, ಆಹಾರ, ನಾಗರಿಕ ಸರಬರಾಜು ಮತ್ತು ಗ್ರಾಹಕರ ವ್ಯವಹಾರಗಳ ಇಲಾಖೆ, ವಿಕಾಸಸೌಧ.
5) ಸರ್ಕಾರದ ಉಪ ಕಾರ್ಯದರ್ಶಿಯವರ ಆಪ್ತ ಸಹಾಯಕರು, ಆಹಾರ, ನಾಗರಿಕ ಸರಬರಾಜು ಮತ್ತು ಗ್ರಾಹಕರ ವ್ಯವಹಾರಗಳ ಇಲಾಖೆ, ವಿಕಾಸಸೌಧ.
6) ಶಾಖಾ ರಕ್ಷಾ ಕಡತ /ಹೆಚ್ಚುವರಿ ಪ್ರತಿ.

ದು)

ಅನುಬಂಧ-1

(ಅ) ತೂಕಗಳು, ಅಳತೆಗಳು, ಮೆಕ್ಯಾನಿಕಲ್ ತೂಕದ ಸಾಧನಗಳ ದುರಸ್ತಿದಾರರು ಹೊಂದಿರಬೇಕಾದ ಪರೀಕ್ಷಾರ್ಥ ಸಾಧನಗಳ ಪಟ್ಟಿ.

(1) 5 ಕೆ.ಜಿ. ಬೀಮ್ ಸ್ಕೇಲ್ 'ಬಿ' ಕ್ಲಾಸ್
(2) 50 ಕೆ.ಜಿ. ಬೀಮ್ ಸ್ಕೇಲ್ 'ಬಿ' ಕ್ಲಾಸ್
(3) 2 ಕೆ.ಜಿ.ಯಿಂದ 1 ಗ್ರಾಂವರೆಗೆ ಬುಲಿಯನ್ ವೆಯಿಟ್ಸ್.
(4) 20 ಕೆ.ಜಿ.ಯಿಂದ 50 ಗ್ರಾಂವರೆಗೆ ಕಬ್ಬಿಣದ ಟೆಸ್ಟ್ ವೆಯಿಟ್ಸ್.
(5) 20 ಗ್ರಾಂನಿಂದ 1 ಗ್ರಾಂವರೆಗೆ ನಾಬ್ ಟೈಪ್ ಟೆಸ್ಟ್ ಬ್ರಾಸ್ ವೆಯಿಟ್ಸ್.
(6) 500 ಮಿಲಿ ಗ್ರಾಂನಿಂದ 1 ಮಿಲಿ ಗ್ರಾಂವರೆಗೆ ಶೀಟ್ ಮೆಟಲ್ ವೆಯಿಟ್ಸ್.
(7) 2 ಮೀಟರ್ ಉದ್ದಳತೆ.
(8) 5 ಲೀಟರ್‌ನಿಂದ 20 ಮಿಲಿ ಲೀಟರ್ ಅಳತೆಗಳು.

(ಆ) ಎಲೆಕ್ಟ್ರಾನಿಕ್ ತೂಕದ ಸಾಧನಗಳ ದುರಸ್ತಿದಾರರು ಹೊಂದಿರಬೇಕಾದ ಪರೀಕ್ಷಾರ್ಥ ಸಾಧನಗಳ ಪಟ್ಟಿ.

(1) 20 ಕೆ.ಜಿ. ಎಲೆಕ್ಟ್ರಾನಿಕ್ ಬ್ಯಾಲೆನ್ಸ್ ಕ್ಲಾಸ್ - II
(2) 2 ಕೆ.ಜಿ.ಯಿಂದ 1 ಗ್ರಾಂವರೆಗೆ ಬುಲಿಯನ್ ವೆಯಿಟ್ಸ್.
(3) 2 ಕೆ.ಜಿ.ಯಿಂದ 50ಗ್ರಾಂ ಕಬ್ಬಿಣದ ಬಟ್ಟುಗಳು.
(4) 20 ಗ್ರಾಂನಿಂದ 1 ಗ್ರಾಂ ನಾಬ್ ಟೈಪ್ ಟೆಸ್ಟ್ ಬ್ರಾಸ್ ವೆಯಿಟ್ಸ್.
(5) 50 ಮಿಲಿ ಗ್ರಾಂನಿಂದ 1 ಮಿಲಿ ಗ್ರಾಂ ಶೀಟ್ ಮೆಟಲ್ ವೆಯಿಟ್ಸ್.

(ಇ) ವೇಬ್ರಿಡ್ಜ್ ದುರಸ್ತಿದಾರರು ಹೊಂದಿರಬೇಕಾದ ಪರೀಕ್ಷಾರ್ಥ ಸಾಧನಗಳು.

(1) 20 ಕೆ.ಜಿ.ಕಬ್ಬಿಣದ ಬಟ್ಟುಗಳು - 50 ಬಟ್ಟುಗಳು

(ಈ) ಸ್ಟೋರೇಜ್ ಟ್ಯಾಂಕ್ ದುರಸ್ತಿದಾರರು ಹೊಂದಿರಬೇಕಾದ ಪರೀಕ್ಷಾರ್ಥ ಸಾಧನಗಳು.

(1) 2 ಲೀಟರ್‌ನಿಂದ 20 ಮಿಲಿ ಲೀಟರ್ ಅಳತೆಗಳು
(2) 10 ಲೀ/ 2 ಮತ್ತು 5ಲೀ/2 ಲೀಟರ್ ಮಾಪಕಗಳು
(3) 15 ಮೀ ಸ್ಟೀಲ್ ಟೇಪ್

# ಅನುಬಂಧ-2

(ಅ) ತೂಕಗಳು, ಅಳತೆಗಳು, ಮೆಕ್ಯಾನಿಕಲ್ ತೂಕದ ಸಾಧನಗಳ ಹಾಗೂ ಆಟೋ ಮತ್ತು ಟ್ಯಾಕ್ಸಿ ಮೀಟರುಗಳ ದುರಸ್ತಿದಾರರು.

ಹೊಂದಿರಬೇಕಾದ ಪರೀಕ್ಷಾರ್ಥ ಉಪಕರಣಗಳ ಪಟ್ಟಿ.

1. ಒಂದು ಸೆಟ್ ಪ್ಲೈರ್ಸ್.
2. ಒಂದು ಸೆಟ್ ಸ್ಕ್ರೂ ಡ್ರೈವರ್
3. ಡ್ರಿಲ್ಲಿಂಗ್ ಮಷಿನ್
4. ಒಂದು ಸೆಟ್ ಸ್ಪ್ಯಾನರ್ಸ್
5. ಒಂದು ಸೆಟ್ ರಿಂಗ್ ಸ್ಪ್ಯಾನರ್ಸ್
6. ಹ್ಯಾಮರ್ ಅಂಡ್ ಕಟ್ಟರ್ಸ್
7. ಸ್ಟವ್/ಬರ್ನರ್
8. ಮೆಲ್ಟಿಂಗ್ ಪಾಟ್
9. ಅನ್ವಿಲ್
10. ಪಾಟ್ ಪಂಚುಗಳು
11. ಕಟ್ಟಿಂಗ್ ಪ್ಲೇಯರ್‌ಗಳು

ಆಟೋ ಮತ್ತು ಟ್ಯಾಕ್ಸಿ ಮೀಟರ್ ದುರಸ್ತಿದಾರರು ಕ್ರಮ ಸಂಖ್ಯೆ 1 ರಿಂದ 11 ರೊಂದಿಗೆ ಕ್ರಮ ಸಂಖ್ಯೆ: 12 ರಿಂದ 14 ರವರೆಗಿನ ಉಪಕರಣಗಳನ್ನು ಹೊಂದಿರಬೇಕು

12. ಸ್ಟಾಪ್ ವಾಚ್
13. ಟೆಸ್ಟ್ ಬೆಂಚು
14. ಒಂದು ಮಾಸ್ಟರ್ ಮೀಟರ್ ಮೆಕ್ಯಾನಿಕಲ್/ಎಲೆಕ್ಟ್ರಾನಿಕ್

(ಬ) ಎಲೆಕ್ಟ್ರಾನಿಕ್ ತೂಕದ ಸಾಧನಗಳ ದುರಸ್ತಿದಾರರು ಹೊಂದಿರಬೇಕಾದ ಉಪಕರಣಗಳ ಪಟ್ಟಿ

(1) ಮಲ್ಟಿ ಮೀಟರ್

(2) ಅಂ ಮೀಟರ್

(3) ಒಂದು ಸೆಟ್ ಸ್ಕ್ರೂ ಡ್ರೈವರ್

(4) ಕಟ್ಟಿಂಗ್ ಪ್ಲೇಯರ್‌ಗಳು

(5) ಒಂದು ಸೆಟ್ ಸ್ಪ್ಯಾನರ್ಸ್

(6) ಸಾಲ್ಡರಿಂಗ್ ಗನ್

(7) ಅಲಿಗ್ರೇಟರ್ ಕ್ಲಿಪ್‌ಗಳು

(8) ವೈರ್ ಕಟ್ಟರ್

(9) ವೈರ್ ಸ್ಟ್ರಿಪ್ಪರ್

(10) ಹಾರ್ಡ್ ನೈಫ್

(11) ಎಕ್ಸ್‌ಟೆನ್ಷನ್ ಬೋರ್ಡ್

(12) ಒಂದು ಸೆಟ್ ಸ್ಟಾರ್ ಸ್ಕ್ರೂ ಡ್ರೈವರ್

(13) ಸ್ಪಿರಿಟ್ ಲೆವೆಲ್ ಮತ್ತು ಮ್ಯಾಗ್ನಿಫೈಯಿಂಗ್ ಗಾಜು

ಅನುಬಂಧ-3

| ಕ್ರಮ ಸಂ | ಅನುಜ್ಞಾರ್ಥಿಗಳು | ಶುಲ್ಕ |
|---|---|---|
| 1 | ತಯಾರಕರು. | ರೂ.3000-00 |
| 2 | ಮಾರಾಟಗಾರರು | ರೂ.2000-00 |
| 3 | ದುರಸ್ತಿದಾರರು | ರೂ.1000-00 |
| 4 | ತಯಾರಕರ / ಮಾರಾಟಗಾರರ/ ದುರಸ್ತಿದಾರರ ಅನುಜ್ಞಾಪತ್ರ ತಿದ್ದುಪಡಿ ಶುಲ್ಕ. | ರೂ.100-00 |

ಕರ್ನಾಟಕ ಸರ್ಕಾರ

**ಕಾನೂನು ಮಾಪನಶಾಸ್ತ್ರ ಇಲಾಖೆ**

ಸಂಖ್ಯೆ/ಕಾಮಾಇ/ತಾಂತ್ರಿಕ/ಸಿಆರ್-156/2019-20

ಕಾನೂನು ಮಾಪನಶಾಸ್ತ್ರ ನಿಯಂತ್ರಕರ ಕಛೇರಿ
ನಂ.1, ಅಲಿ ಆಸ್ಕರ ರಸ್ತೆ, ಪಿ.ಬಿ.ನಂ.175
ಬೆಂಗಳೂರು, ದಿನಾಂಕ: 23-03-2020

**ಸುತ್ತೋಲೆ**

ವಿಷಯ: ಸತ್ಯಾಪನೆ ಮುದ್ರೆ ಕಾರ್ಯ – ಕಛೇರಿಗಳಿಗೆ ಅನಧಿಕೃತ ವ್ಯಕ್ತಿಗಳು ಪ್ರವೇಶಿಸುವುದನ್ನು ನಿರ್ಭಂದಿಸುವ ಬಗ್ಗೆ ಸೂಚನೆಗಳು.

ಉಲೇಖ: 1.ಕಾಮಾಇ/ಸನಿತಾ/ವಿವ-203/03-04 ದಿ: 19-06-2003
2.ಕಾಮಾಇ/ಸನಿತಾ/ಸಿಆರ್-20/06-07 ದಿ:25-05-2006
3. ಕಾಮಾಇ/ಸನಿತಾ/ಸಿಆರ್-129/14-15 ದಿ:06-03-2015

ಕಾನೂನು ಮಾಪನಶಾಸ್ತ್ರ ಇಲಾಖೆಯ ಕ್ಷೇತ್ರಾಧಿಕಾರಿಗಳ ಕಛೇರಿಗಳಿಗೆ ಅನಧಿಕೃತ ವ್ಯಕ್ತಿಗಳು ಪದೇ ಪದೇ ಪ್ರವೇಶಿಸುತ್ತಿದ್ದು ಇದರಿಂದ ದೈನಂದಿನ ಕೆಲಸ ಕಾರ್ಯಗಳನ್ನು ಸುಸೂತ್ರವಾಗಿ ನಡೆಸಲು ಸಾಧ್ಯವಾಗದೇ ಕಛೇರಿಯ ಸ್ವಾಸ್ಥ್ಯ ಮತ್ತು ವಾತಾವರಣ ಕಲುಷಿತವಾಗುತ್ತಿರುವ ಬಗ್ಗೆ ಹಾಗೂ ವ್ಯಾಪಾರಸ್ಥರ ಸ್ಥಳಗಳಿಗೆ ಕ್ಷೇತ್ರಾಧಿಕಾರಿಗಳು ಭೇಟಿ ನೀಡದೇ ಸತ್ಯಾಪನೆ ಮತ್ತು ಮುದ್ರೆ ಕೆಲಸಗಳನ್ನು ಕೈಗೊಳ್ಳುತ್ತಿರುವ ಬಗ್ಗೆಯೂ ಸಹ ದೂರುಗಳು ಕೇಳಿಬರುತ್ತಿವೆ. ಈ ಹಿನ್ನೆಲೆಯಲ್ಲಿ ಸತ್ಯಾಪನೆ ಮುದ್ರೆ ಕಾರ್ಯ, ಕಛೇರಿ ಕೆಲಸ ಕಾರ್ಯಗಳು ಸುಸೂತ್ರವಾಗಿ ನಿರ್ವಹಣೆಯಾಗುವ ಉದ್ದೇಶದಿಂದ ಈ ಕೆಳಕಂಡ ಸೂಚನೆಗಳನ್ನು ಕಟ್ಟುನಿಟ್ಟಾಗಿ ಪಾಲಿಸಲು ಸೂಚನೆ ನೀಡಲಾಗಿದೆ.

1. ವ್ಯಾಪಾರಸ್ಥರು ಕಛೇರಿಗೆ ಹಾಜರುಪಡಿಸಿದ ತೂಕ, ಅಳತೆ, ತೂಕದ ಸಾಧನಗಳನ್ನು ನಿಯಮಾನುಸಾರ ಪರಿಶೀಲಿಸಿ ಸತ್ಯಾಪನೆ ಮತ್ತು ಮುದ್ರೆ ಕಾರ್ಯ ಕೈಗೊಳ್ಳುವುದು.

2. ದುರಸ್ತಿ ಅನುಜ್ಞಾ ಪತ್ರದಲ್ಲಿ ವಿದ್ಯುನ್ಮಾನ ತೂಕದ ಸಾಧನಗಳನ್ನು ದುರಸ್ತಿ ಮಾಡಲು ಅನುಮತಿ ಹೊಂದಿದವರು ಮಾತ್ರ ದುರಸ್ತಿ ಕಾರ್ಯನಿರ್ವಹಿಸಲು ಅರ್ಹರಾಗಿದ್ದು, ಕ್ಷೇತ್ರಾಧಿಕಾರಿಗಳು ಇದನ್ನು ಖಚಿತಪಡಿಸಿಕೊಂಡು ನಂತರ ಸತ್ಯಾಪನೆ ಮುದ್ರೆ ಕಾರ್ಯ ನಿರ್ವಹಿಸುವುದು.

3. ಅನುಜ್ಞಾ ಪತ್ರ ಹೊಂದಿರದೆ, ದುರಸ್ತಿದಾರರಲ್ಲದೆ ಬೇನಾಮಿ ವ್ಯಕ್ತಿಗಳು ದುರಸ್ತಿ ಕಾರ್ಯ ನಿರ್ವಹಿಸಿದಲ್ಲಿ ನಿಯಮಾನುಸಾರ ಕ್ರಮ ಕೈಗೊಳ್ಳುವುದು.

4. ಕ್ಷೇತ್ರಾಧಿಕಾರಿಗಳು ನಿಯಮಾನುಸಾರವಾಗಿ ವ್ಯಾಪಾರಸ್ಥರಿಂದ ಸತ್ಯಾಪನೆ ಮುದ್ರೆ ಶುಲ್ಕವನ್ನು ಮುಂಗಡವಾಗಿ ಪಡೆಯಬೇಕಾಗಿದ್ದು, ದುರಸ್ತಿದಾರರು ಯಾವುದೇ ಕಾರಣಕ್ಕೂ ವ್ಯಾಪಾರಸ್ಥರಿಂದ ಸತ್ಯಾಪನೆ ಶುಲ್ಕವನ್ನು ವಸೂಲು ಮಾಡಬಾರದು.

5. ಕಛೇರಿಯ ಅಧಿಕಾರಿಗಳು ಮತ್ತು ಸಿಬ್ಬಂದಿಯವರು ದೈನಂದಿನ ವೈಯಕ್ತಿಕ ಹಣದ ಘೋಷಣೆಯನ್ನು ಕಡ್ಡಾಯವಾಗಿ ಮಾಡುವ ಬಗ್ಗೆ ಹಾಗೂ ಸಂಬಂಧಪಟ್ಟ ವಹಿಯನ್ನು ನಿರ್ವಹಣೆ ಮಾಡಲು ತಿಳಿಸಿದೆ.

6. ಸತ್ಯಾಪನೆ ಮತ್ತು ಮುದ್ರೆ ಕಾರ್ಯಕ್ಕೆ ಉಪಯೋಗಿಸುವ ಎಲ್ಲಾ ಸಾಧನ-ಸಲಕರಣೆಗಳು ಸಂಬಂಧಪಟ್ಟ ಕ್ಷೇತ್ರಾಧಿಕಾರಿಗಳ ಅಭಿರಕ್ಷಣೆಯಲ್ಲಿರತಕ್ಕದ್ದು, ಯಾವುದೇ ಕಾರಣಕ್ಕೂ ಬೇರೆಯವರ ಬಳಿ ಇರತಕ್ಕದ್ದಲ್ಲ. ಈ ಬಗ್ಗೆ ಮೇಲಧಿಕಾರಿಗಳು ತನಿಖೆ ಕೈಗೊಂಡು ಉಲ್ಲಂಘಿಸಿದವರ ಮೇಲೆ ಕ್ರಮ ಕೈಗೊಳ್ಳುವುದು.

7. ಸತ್ಯಾಪನೆ ಮುದ್ರೆ ಕಾರ್ಯಕ್ಕೆ ಬಳಸುವ ಲೆಡ್ ಮತ್ತು ಟ್ವಿಸ್ಟೆಡ್ ವೈರ್‌ಗಳನ್ನು ನಿಗಧಿಪಡಿಸಿರುವ ತಾಂತ್ರಿಕ ವಿವರಣೆಗಳಂತೆ (Technical Specification) ಇರುವುದನ್ನು ಖಾತರಿ ಪಡಿಸಿಕೊಂಡು ತೂಕದ ಸಾಧನಗಳಿಗೆ ಖುದ್ದಾಗಿ ಸತ್ಯಾಪನೆ ಮಾಡುವುದು ಮತ್ತು ಇವು ಕ್ರಮಬದ್ಧವಾಗಿದೆ ಹಾಗೂ ಲೋಪದೋಷಗಳಿಲ್ಲವೆಂದು ಖಚಿತ ಪಡಿಸಿಕೊಂಡು ಮುದ್ರೆ ಮಾಡತಕ್ಕದ್ದು.

8. ಹೊಸ ತೂಕ ಮತ್ತು ಅಳತೆಗಳನ್ನು ಹಾಗೂ ತೂಕ ಮತ್ತು ಅಳತೆ ಸಾಧನಗಳ ಸತ್ಯಾಪನೆ ಮುದ್ರೆ ಕೈಗೊಳ್ಳುವಾಗ ಕಡ್ಡಾಯವಾಗಿ ಸಂಬಂಧಿಸಿದ ತಯಾರಕ/ಮಾರಾಟಗಾರರಿಂದ ಇನ್‌ವಾಯ್ಸ್/ಬಿಲ್ಲು ಹಾಗೂ ಇತರ ದಾಖಲೆಗಳನ್ನು ಕಡ್ಡಾಯವಾಗಿ ಪಡೆಯುವುದು ಹಾಗೂ ಸದರೀ ದಾಖಲೆಗಳನ್ನು ಕಚೇರಿಯಲ್ಲಿ ತಪ್ಪದೇ ನಿರ್ವಹಿಸಲು ತಿಳಿಸಿದೆ.

9. ದುರಸ್ತಿದಾರರುಗಳು ದುರಸ್ತಿ/ಸರ್ವಿಸ್ ಕಾರ್ಯ ಮಾಡುವ ಮೊದಲು ಸೀಲ್‌ಗಳನ್ನು ಒಡೆದು ತೆಗೆಯುವ ಮೊದಲು ಸಂಬಂಧಪಟ್ಟ ಕ್ಷೇತ್ರಾಧಿಕಾರಿಗಳಿಗೆ ಲಿಖಿತ ಮೂಲಕ ಮನವಿ ಸಲ್ಲಿಸಿದ ನಂತರ ಅನುಮತಿ ನೀಡುವುದು ಕಡ್ಡಾಯವಾಗಿದೆ. ಈ ರೀತಿ ಅನುಮತಿ ಪಡೆದು ಒಡೆದು ತೆಗೆದ ನಿರುಪಯುಕ್ತ (ಹಳೆಯ ಮುದ್ರೆ ಹೊಂದಿರುವ) ಲೆಡ್ ಮತ್ತು ವೈರ್‌ಗಳು ದುರ್ಬಳಕೆ ಆಗದಂತೆ ಎಚ್ಚರವಹಿಸಿ ಕೂಡಲೇ ನಾಶಪಡಿಸಲು ಕ್ರಮ ಕೈಗೊಳ್ಳುವುದು.

10. ವ್ಯಾಪಾರಸ್ಥರ ಲಿಖಿತ ಮನವಿಯ ಮೇರೆಗೆ ವ್ಯಾಪಾರಸ್ಥರ ಸ್ಥಳಗಳಿಗೆ ಖುದ್ದಾಗಿ ಭೇಟಿ ನೀಡಿ ತೂಕಗಳು/ಅಳತೆಗಳು/ತೂಕ-ಅಳತೆ ಸಾಧನಗಳ ಸತ್ಯಾಪನೆ ಮುದ್ರೆ ಕೆಲಸವನ್ನು ನಿಯಮಾನುಸಾರವಾಗಿ ನಿರ್ವಹಿಸಲು ಅಧಿಕಾರಿಗಳು ಕ್ರಮ ಕೈಗೊಳ್ಳುವುದು, ತತ್ಸಂಬಂಧಿತ ದುರಸ್ತಿದಾರರ ನಿಗಧಿಪಡಿಸಲಾದ ಎ.ಎಂ.ಸಿ., ಕಾಂಟ್ರಾಂಕ್ಟ್ ಪ್ರತಿಯನ್ನು ಪಡೆದು ವಿವರಗಳನ್ನು ಖಾತರಿಪಡಿಸಿಕೊಂಡು ದಾಖಲಿಸಿ ಕಛೇರಿಯಲ್ಲಿ ನಿರ್ವಹಿಸಲು ತಿಳಿಸಲಾಗಿದೆ. ವ್ಯಾಪಾರಸ್ಥರ ಸ್ಥಳಗಳಿಗೆ ಭೇಟಿ ನೀಡದೆ ಸತ್ಯಾಪನಾ ಪ್ರಮಾಣ ಪತ್ರ ನೀಡುವುದು ನಿಯಮಾವಳಿಗಳಿಗೆ ವಿರುದ್ಧವಾಗಿದ್ದು ಅಂತಹವರ ಮೇಲೆ ಶಿಸ್ತು ಕ್ರಮ ಕೈಗೊಳ್ಳಲಾಗುವುದು.

11. ದುರಸ್ತಿದಾರರು ದುರಸ್ತಿಗಾಗಿ ತೂಕ/ಅಳತೆಗಳು ತೂಕ ಮತ್ತು ಅಳತೆ ಸಾಧನಗಳನ್ನು ಸ್ವೀಕರಿಸಿದ 3 ದಿನಗಳ ಒಳಗಾಗಿ ದುರಸ್ತಿ ಮಾಡಿ ಸಂಬಂಧಿಸಿದವರಿಗೆ ಹಿಂತಿರುಗಿಸಬೇಕಾಗಿದ್ದು, ಇದನ್ನು ಖಾತರಿಪಡಿಸಿಕೊಳ್ಳುವುದು.

12. ದುರಸ್ತಿ ಲೈಸೆನ್ಸ್ ಹೊಂದಿರುವವರು ಸ್ವತಃ ತಾವೇ ದುರಸ್ತಿ ಕಾರ್ಯ ನಿರ್ವಹಿಸಬಹುದು ಅಥವಾ ದುರಸ್ತಿ ಲೈಸೆನ್ಸ್ ಹೊಂದಿದ ಸಂಸ್ಥೆಯಲ್ಲಿ ಕೆಲಸ ನಿರ್ವಹಿಸುವ ನುರಿತ ಕೆಲಸಗಾರರಿಂದ ಮಾತ್ರ ದುರಸ್ತಿ ಕೆಲಸ ಮಾಡಿಸಬಹುದು. ಸದರೀ ನುರಿತ ಕೆಲಸಗಾರರುಗಳನ್ನು ಸಂಸ್ಥೆಗೆ ಪಡೆಯಲು ನಿಯಂತ್ರಕರಿಂದ ಅನುಮೋದನೆ ಪಡೆಯುವುದು ಕಡ್ಡಾಯವಾಗಿರುತ್ತದೆ. ಬೇರೆ ವ್ಯಕ್ತಿಗಳಿಂದ ದುರಸ್ತಿ ಕಾರ್ಯ ಮಾಡಿಸುವಂತಿಲ್ಲ.

13. ದುರಸ್ತಿದಾರರು ತಮ್ಮ ಎ.ಎಂ.ಸಿ. ಫಾರಂನಲ್ಲಿ ವ್ಯಾಪಾರಸ್ಥರ ವಿಳಾಸ ಮತ್ತು ತೂಕ ಅಳತೆ, ತೂಕ ಮತ್ತು ಅಳತೆ ಸಾಧನಗಳ ವಿವರಗಳನ್ನು ಕಡ್ಡಾಯವಾಗಿ ನಮೂದಿಸಿರುವುದನ್ನು ಪರಿಶೀಲಿಸಬೇಕು. ದಿನಾಂಕಗಳನ್ನೊಳಗೊಂಡ ಎ.ಎಂ.ಸಿ. ಕಾಂಟ್ರಾಕ್ಟ್ ಪ್ರತಿಗಳನ್ನು ಮರು ಸತ್ಯಾಪನೆ ದಿನಾಂಕದಿಂದ 15 ದಿನದ ಮುಂಚಿತವಾಗಿ ಸಂಬಂಧಿಸಿದ ಕ್ಷೇತ್ರಾಧಿಕಾರಿಗಳು ಪಡೆಯಬೇಕು. ಹಾಗೂ ಕ್ಷೇತ್ರಾಧಿಕಾರಿಗಳ ಕಛೇರಿಗಳಿಗೆ ಹಾಗೂ ತಾತ್ಕಾಲಿಕ ಶಿಬಿರ ಕಛೇರಿಗಳಿಗೆ ಸತ್ಯಾಪನೆಗಾಗಿ ವ್ಯಾಪಾರಸ್ಥರು ತಂದ ತೂಕ ಮತ್ತು ಅಳತೆಗಳನ್ನು ದುರಸ್ತಿ ಮಾಡಿಸಬೇಕಾದಲ್ಲಿ ಅಂತಹ ತೂಕ ಅಳತೆಗಳನ್ನು ದುರಸ್ತಿ ಮಾಡಲು ಎ.ಎಂ.ಸಿ.ಫಾರಂಗಳನ್ನು ಉಪಯೋಗಿಸಬಾರದು.

14. ಸ್ಟೋರೇಜ್ ಟ್ಯಾಂಕ್‌ಗಳು/ಬ್ರಿವರಿಗಳು ಹಾಗೂ ತತ್ಸಂಬಂಧಿತ ಸಾಧನಗಳ ದುರಸ್ತಿ ಕೈಗೊಳ್ಳುವ ದುರಸ್ತಿದಾರರು ಕಡ್ಡಾಯವಾಗಿ ಸಂಬಂಧಿಸಿದ ವರದಿಗಳನ್ನು ಸಂಬಂಧಿಸಿದ ಅಧಿಕಾರಿಗಳಿಗೆ ಸಲ್ಲಿಸತಕ್ಕದ್ದು ಹಾಗೂ ಸಂಬಂಧಿಸಿದ ಅಧಿಕಾರಿಗಳು ಸದರಿ ವರದಿಗಳನ್ನು ಸದರಿಯವರಿಂದ ಪಡೆದು ಕಛೇರಿಯಲ್ಲಿ ನಿರ್ವಹಿಸತಕ್ಕದ್ದು.

15. ವ್ಯಾಪಾರಸ್ಥರು ಮತ್ತು ದುರಸ್ತಿದಾರರು ಮಾಡಿಕೊಳ್ಳುವ ಒಪ್ಪಂದದಲ್ಲಿ ದಿನಾಂಕಗಳನ್ನೊಳಗೊಂಡಂತೆ ವ್ಯಾಪಾರಸ್ಥರ ಸಹಿ ಮತ್ತು ವಿಳಾಸ ಹಾಗೂ ದುರಸ್ತಿದಾರರ ಸಹಿ ಇರಬೇಕು. ಕ್ಷೇತ್ರಾಧಿಕಾರಿಗಳು ಎ.ಎಂ.ಸಿ.ಫಾರಂ ನಲ್ಲಿ ವ್ಯಾಪಾರಸ್ಥರ ಹಾಗೂ ದುರಸ್ತಿದಾರರ ಸಹಿಯನ್ನು ಪರಿಶೀಲಿಸಿ, ವ್ಯಾಪಾರಸ್ಥರೇ ಫಾರಂನಲ್ಲಿ ಸಹಿ ಮಾಡಿರುವುದನ್ನು ಖಚಿತಪಡಿಸಿಕೊಂಡ ನಂತರ ಸತ್ಯಾಪನೆ ಮುದ್ರೆ ಕೈಗೊಳ್ಳಬೇಕು. ಒಂದು ವೇಳೆ ಸಂಶಯ ಬಂದರೆ ಸಂಬಂಧಪಟ್ಟ ವ್ಯಾಪಾರಸ್ಥರಲ್ಲಿ ವಿಚಾರಿಸಿ ಅವರ ಹೇಳಿಕೆಯನ್ನು ಪಡೆದು ಈ ಬಗ್ಗೆ ಸಂಬಂಧಪಟ್ಟ ಮೇಲಾಧಿಕಾರಿಗಳಿಗೆ ಮತ್ತು ಕೇಂದ್ರ ಕಛೇರಿಯ ಗಮನಕ್ಕೆ ತಕ್ಷಣವೇ ತರುವುದು.

16. ಕ್ಷೇತ್ರಾಧಿಕಾರಿಗಳು ಸತ್ಯಾಪನೆ ಮತ್ತು ಮುದ್ರೆ ಕೈಗೊಂಡ ನಂತರ ಸತ್ಯಾಪನಾ ಪ್ರಮಾಣ ಪತ್ರವನ್ನು ಸಂಬಂಧಿಸಿದ ವ್ಯಾಪಾರಸ್ಥರಿಗೆ ನೀಡುವುದು ಮತ್ತು ಸ್ವೀಕೃತಿ ಪಡೆಯುವುದು ಈ ಸಂಬಂಧ ವಹಿಯನ್ನು ನಿರ್ವಹಿಸುವುದು ಯಾವುದೇ ಕಾರಣಕ್ಕೂ ದುರಸ್ತಿದಾರರಿಗೆ ನೀಡತಕ್ಕದ್ದಲ್ಲ.

17. ಕಛೇರಿಯಲ್ಲಾಗಲೀ ಅಥವಾ ಶಿಬಿರ ಕಛೇರಿಯಲ್ಲಾಗಲೀ, ತಾತ್ಕಾಲಿಕ ಕಛೇರಿಗಳಲ್ಲಿ ದುರಸ್ತಿದಾರರು ದುರಸ್ತಿ ಕೆಲಸವನ್ನು ಕೈಗೊಳ್ಳಬಾರದು, ಈ ರೀತಿಯ ಪ್ರಕರಣಗಳು ಕಂಡು ಬಂದಲ್ಲಿ ಕ್ಷೇತ್ರಾಧಿಕಾರಿಗಳನ್ನು ಶಿಸ್ತು ಕ್ರಮಕ್ಕೆ ಒಳಪಡಿಸಲಾಗುವುದು.

18. ಲೈಸೆನ್ಸ್ ಹೊಂದಿರುವ ತಯಾರಕರು/ಮಾರಾಟಗಾರರ/ದುರಸ್ತಿದಾರರು ಈ ಕಛೇರಿಯಿಂದ ಹೊರಡಿಸಲಾಗಿರುವ ಸುತ್ತೋಲೆ ಸಂಖ್ಯೆ: ಕಾಮಾಇ/ಸನಿತಾ/ಸಿಆರ್-132/2019-20 ದಿನಾಂಕ: 25-02-2020ರಲ್ಲಿ ತಿಳಿಸಿರುವಂತೆ ರಿಜಿಸ್ಟರನ್ನು ನಿರ್ವಹಿಸಿ ಪ್ರತೀ ಮೂರು ತಿಂಗಳಿಗೊಮ್ಮೆ (ತ್ರೈಮಾಸಿಕವಾಗಿ) ಕಡ್ಡಾಯವಾಗಿ ಸಂಬಂಧಿಸಿದ ಮೇಲಧಿಕಾರಿಗಳ ಪರಿಶೀಲನೆಗೆ ಸಲ್ಲಿಸಬೇಕು.

19. ದುರಸ್ತಿದಾರರ ಬಿಲ್ ಬುಕ್ ಅಥವಾ AMC Formಗಳು ತ್ರಿಪ್ರತಿಯಲ್ಲಿರುವುದು, ಅವುಗಳ ಪುಟಗಳು (folios) ಕ್ರಮಬದ್ಧವಾಗಿ ಕ್ರಮ ಸಂಖ್ಯೆಯನ್ನು ಹೊಂದಿರುವುದನ್ನು ಸಂಬಂಧಿಸಿದ ಸಹಾಯಕ ನಿಯಂತ್ರಕರು ದೃಢೀಕರಿಸಲು ಕ್ರಮ ಕೈಗೊಳ್ಳತಕ್ಕದ್ದು, ದುರಸ್ತಿದಾರರು ತಮ್ಮ AMC Formನಲ್ಲಿ ಅದರ ಕ್ರಮ ಸಂಖ್ಯೆ ವ್ಯಾಪಾರಸ್ಥರ ಹೆಸರು, ವಿಳಾಸ, Cell No., GST No., ದುರಸ್ತಿ ಕೈಗೊಳ್ಳುವ ತೂಕ/ಅಳತೆ ಸಾಧನಗಳ ವಿವರಗಳನ್ನು ಕಡ್ಡಾಯವಾಗಿ ನಮೂದು ಮಾಡಿರುವುದನ್ನು ಖಾತರಿ ಪಡಿಸಿಕೊಳ್ಳುವುದು. ಸದರಿ AMC Form ಪ್ರತಿಯನ್ನು ಸತ್ಯಾಪನೆ ಮುದ್ರೆ ಕೈಗೊಳ್ಳುವ 15 ದಿನಗಳ ಮುಂಚಿತವಾಗಿ ಸಂಬಂಧಪಟ್ಟವರಿಂದ ಪಡೆಯುವುದು ಹಾಗೂ ಕಛೇರಿಯಲ್ಲಿ ನಿರ್ವಹಿಸುವುದು.

20. ಕಛೇರಿಗೆ ಅನಧಿಕೃತ ವ್ಯಕ್ತಿಗಳು, ಬ್ರೋಕರ್‌ಗಳು ಪ್ರವೇಶಿಸದಂತೆ ಅಧಿಕಾರಿಗಳು ಕ್ರಮ ಕೈಗೊಳ್ಳಲು ತಿಳಿಸಲಾಗಿದೆ. ದುರಸ್ತಿದರರು ವಿನಾಃಕಾರಣ ಕಛೇರಿಗೆ ಪದೇ ಪದೇ ಬಂದು ಸಿಬ್ಬಂದಿಯವರ ಜೊತೆ ವೃಥಾ ಕಾಲಹರಣ ಮಾಡುವುದನ್ನು ತಡೆಯಲು ಅಧಿಕಾರಿಗಳು ಸೂಕ್ತ ಕ್ರಮ ಕೈಗೊಳ್ಳುವುದು, ತಪ್ಪಿದಲ್ಲಿ ಸಂಬಂಧಿಸಿದವರನ್ನೇ ನೇರ ಹೊಣೆಗಾರರನ್ನಾಗಿಸಿ ಕ್ರಮ ಜರುಗಿಸಲಾಗುವುದು. ಕಛೇರಿಗೆ ಅನಧಿಕೃತ ವ್ಯಕ್ತಿಗಳ ಪ್ರವೇಶವನ್ನು ನಿರ್ಬಂಧಿಸುವ ಬಗ್ಗೆ ಕಛೇರಿಯ ನಾಮಫಲಕದಲ್ಲಿ ಪ್ರದರ್ಶಿಸಿ, ಸಾರ್ವಜನಿಕರಲ್ಲಿ ಜಾಗೃತಿ ಉಂಟು ಮಾಡಲು ತಿಳಿಸಿದೆ.

21. ವ್ಯಾಪಾರಸ್ಥರಿಗೆ ನೀಡುವ ಎಲ್ಲಾ ದುರಸ್ತಿ ಬಿಲ್ಲುಗಳು, ವಾರ್ಷಿಕ (AMC) ನಿರ್ವಹಣಾ ಒಪ್ಪಂದಗಳಲ್ಲಿ ಕೆಳಗಿನ ಮಾಹಿತಿಗಳನ್ನು ಏಕ ರೂಪದಲ್ಲಿ ಗೊಂದಲಕ್ಕೆ ಅವಕಾಶ ನೀಡದಂತೆ ಮತ್ತು ವ್ಯಾಪಾರಸ್ಥರಿಗೆ ಹಾಗೂ ಇತರರಿಗೆ ತಪ್ಪು ಸಂದೇಶ ಒದಗಿಸದಂತೆ ಶೀರ್ಷಿಕೆಗಳನ್ನು ಕೆಳಗಿನ ಮಾಹಿತಿಯುಳ್ಳಂತೆ ಬಿಲ್ ಮುದ್ರಿಸಿಕೊಂಡು ಉಪಯೋಗಿಸಲು ರಾಜ್ಯದಲ್ಲಿನ ಎಲ್ಲಾ ತೂಕ ಮತ್ತು ಅಳತೆ ದುರಸ್ತಿದಾರರಿಗೆ ನಿರ್ದೇಶಿಸಿದೆ.

(1) ಬಿಲ್ಲು ಪುಸ್ತಕಗಳು, ಒಪ್ಪಂದಗಳ ಕರಾರು ಮತ್ತು ವಾರ್ಷಿಕ/ಅರೆವಾರ್ಷಿಕ/ತ್ರೈಮಾಸಿಕ ನಿರ್ವಹಣಾ ಕರಾರುಗಳ ಪುಸ್ತಕಗಳನ್ನು 50 ಅಥವಾ 100 ಪುಟಗಳಲ್ಲಿ ಮತ್ತು ಪ್ರತಿ ಪುಟಗಳು ತ್ರಿಪ್ರತಿ ಹಾಳೆಗಳಂತೆ (Triplicate) ಮತ್ತು ಪ್ರತೀ ಹಾಳೆಗೂ (folio) ಅವುಗಳ ಕ್ರಮ ಸಂಖ್ಯೆ ದಾಖಲಿಸಿ ಮುದ್ರಿಸಿಕೊಳ್ಳುವುದು. Computer Bill Or Online Bill ಇದ್ದರೆ ಅದರ ದಿನಾಂಕ, ಕ್ರಮ ಸಂಖ್ಯೆ ಕಡ್ಡಾಯವಾಗಿರತಕ್ಕದ್ದು.

(2) ಮುಖ್ಯ ತಲೆಬರಹದಲ್ಲಿ ದುರಸ್ತಿ ಪರವಾನಗಿ ವಿವರಗಳು ಲೈಸೆನ್ಸ್‌ನಲ್ಲಿರುವಂತೆ ಮುದ್ರಿತವಾಗಿರುವುದನ್ನು ಖಚಿತಪಡಿಸಿಕೊಳ್ಳುವುದು. ಹಾಗೂ ಜಿ.ಎಸ್.ಟಿ. ಸಂಖ್ಯೆಯನ್ನು ಹೊಂದಿರತಕ್ಕದ್ದು.

(3) ಲೈಸೆನ್ಸ್ ವಿಚಾರದಲ್ಲಿ ಪಡೆಯಲಾಗಿರುವ ಲೈಸೆನ್ಸ್ ಸಂಖ್ಯೆ ಹಾಗೂ ಸ್ಥಳೀಯ ಭಾಷೆಗಳಲ್ಲಿ "ಕಾನೂನು ಮಾಪನಶಾಸ್ತ್ರ ಇಲಾಖೆಯಿಂದ ತೂಕ ಮತ್ತು ಅಳತೆ ದುರಸ್ತಿ ಪರವಾನಗಿ ಹೊಂದಿರುವವರು" ಎಂದು ಮಾತ್ರ ಮುದ್ರಿಸಿಕೊಳ್ಳುವುದು.

(4) ದುರಸ್ತಿ ಬಿಲ್ಲುಗಳಲ್ಲಿ ಹಾಗೂ AMC Formಗಳಲ್ಲಿ ದುರಸ್ತಿಯ ದರಗಳನ್ನು ಬಿಡಿಯಾಗಿ ದಾಖಲಿಸಿ ಮೊತ್ತವನ್ನು ಅಕ್ಷರ ಹಾಗೂ ಸಂಖ್ಯೆಯಲ್ಲಿ ದಾಖಲಿಸುವುದು. ಹಾಗೂ ಜಿ.ಎಸ್.ಟಿ. ದರಗಳನ್ನು ಪ್ರತ್ಯೇಕವಾಗಿ ನಮೂದಿಸುವುದು.

(5) ಬಿಲ್‌ನ ಹಿಂಭಾಗದಲ್ಲಿ ದುರಸ್ತಿಗೆ ಪೂರಕವಾದ ಷರತ್ತುಗಳಿದ್ದಲ್ಲಿ ಅವುಗಳನ್ನು ಮುದ್ರಿಸಿಕೊಳ್ಳಬಹುದಾಗಿದೆ.

22. ಈ ಸಂಬಂಧ ಕೇಂದ್ರ ಕಛೇರಿಯಿಂದ ಹೊರಡಿಸಲಾದ ಸುತ್ತೋಲೆ, ಆದೇಶಗಳನ್ನು ಕಟ್ಟುನಿಟ್ಟಾಗಿ ಪಾಲಿಸುವುದು.

ಈ ಮೇಲಿನ ಸೂಚನೆ/ನಿರ್ದೇಶನಗಳನ್ನು ಕಟ್ಟುನಿಟ್ಟಾಗಿ ಯಾವುದೇ ಲೋಪವಿಲ್ಲದಂತೆ ಪಾಲಿಸಲು ಎಲ್ಲಾ ಕ್ಷೇತ್ರಾಧಿಕಾರಿಗಳಿಗೂ ಮತ್ತು ಲೈಸೆನ್ಸ್ ದಾರರಿಗೂ ತಿಳಿಸಲಾಗಿದೆ. ತಪ್ಪಿದಲ್ಲಿ ಶಿಸ್ತು ಕ್ರಮ ಜರುಗಿಸಲಾಗುವುದು.

ನಿಯಂತ್ರಕರು
ಕಾನೂನು ಮಾಪನಶಾಸ್ತ್ರ ಇಲಾಖೆ

ಗೆ,

1. ರಾಜ್ಯದ ಎಲ್ಲಾ ಕಾನೂನು ಮಾಪನಶಾಸ್ತ್ರ ಉಪ ನಿಯಂತ್ರಕರು, ಸಹಾಯಕ ನಿಯಂತ್ರಕರು ಮತ್ತು ನಿರೀಕ್ಷಕರುಗಳಿಗೆ – ಅಗತ್ಯ ಕ್ರಮಕ್ಕಾಗಿ.
2. ರಾಜ್ಯದ ಎಲ್ಲಾ ತಯಾರಕರು, ಮಾರಾಟಗಾರರು ಮತ್ತು ದುರಸ್ತಿದಾರರುಗಳಿಗೆ (ಕ್ಷೇತ್ರಾಧಿಕಾರಿಗಳ ಮೂಲಕ).
3. ಅಧೀಕ್ಷಕರು (ತಾಂತ್ರಿಕ) 4. ನಿಯಂತ್ರಕರ ಆಪ್ತ ಶಾಖೆ 5. ರಕ್ಷತಾ ಕಡತ.

## ಕರ್ನಾಟಕ ಸರ್ಕಾರ

ಸಂಖ್ಯೆ: ಆನಾಸ 223 ಇಭತ 2019 (ಇ-ಆಫೀಸ್)

ಕರ್ನಾಟಕ ಸರ್ಕಾರ ಸಚಿವಾಲಯ
ವಿಕಾಸಸೌಧ
ಬೆಂಗಳೂರು, ದಿನಾಂಕ:08.02.2021.

### ತಿದ್ದುಪಡಿ ಅಧಿಸೂಚನೆ.

ಸರ್ಕಾರದ ಅಧಿಸೂಚನೆ ಸಂಖ್ಯೆ:ಆನಾಸ 223 ಇಭತ 2019 (ಇ-ಆಫೀಸ್), ದಿನಾಂಕ:10.12.2020ರ ಕ್ರಮ ಸಂಖ್ಯೆ:2ರ 5ನೇ ಸಾಲಿನಲ್ಲಿರುವ "ಸ್ಕಿಲ್ಸ್ ಇಂಡಿಯಾ ಪ್ರೋಗ್ರಾಮ್ ಇವರಿಂದ ಸ್ಕಿಲ್ಸ್ ಪ್ರಮಾಣ ಪತ್ರವನ್ನು ಹೊಂದಿರುವುದರ ಜೊತೆಗೆ" ಎಂಬುದನ್ನು ಕೈಬಿಟ್ಟು ಓದಿಕೊಳ್ಳತಕ್ಕದ್ದು.

ಉಳಿದಂತೆ ಸದರಿ ಅಧಿಸೂಚನೆಯಲ್ಲಿ ಯಾವುದೇ ಬದಲಾವಣೆ ಇರುವುದಿಲ್ಲ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು
ಅವರ ಹೆಸರಿನಲ್ಲಿ

(ಬಿ.ಕೆ ದೇವಯ್ಯ)
ಸರ್ಕಾರದ ಅಧೀನ ಕಾರ್ಯದರ್ಶಿ
ಆಹಾರ ನಾಗರಿಕ ಸರಬರಾಜು ಮತ್ತು ಗ್ರಾಹಕರ ವ್ಯವಹಾರಗಳ
ಹಾಗೂ ಕಾನೂನು ಮಾಪನಶಾಸ್ತ್ರ ಇಲಾಖೆ.

ಇವರಿಗೆ:

1. ನಿಯಂತ್ರಕರು, ಕಾನೂನು ಮಾಪನಶಾಸ್ತ್ರ ಇಲಾಖೆ, ಆಲಿಆಸ್ಕರ್ ರಸ್ತೆ, ಬೆಂಗಳೂರು-52.
2. ಸಹಾಯಕ ನಿಯಂತ್ರಕರು/ನಿರೀಕ್ಷಕರು/ಕಾನೂನು ಮಾಪನಶಾಸ್ತ್ರ ಇಲಾಖೆ(ನಿಯಂತ್ರಕರು, ಕಾನೂನು ಮಾಪನಶಾಸ್ತ್ರ ಇಲಾಖೆ ಇವರ ಮುಖಾಂತರ).
3. ಆಹಾರ,ನಾಗರಿಕ ಸರಬರಾಜು ಮತ್ತು ಗ್ರಾಹಕರ ವ್ಯವಹಾರಗಳ ಹಾಗೂ ಕಾನೂನು ಮಾಪನಶಾಸ್ತ್ರ ಇಲಾಖಾ ಸಚಿವರ ಆಪ್ತ ಕಾರ್ಯದರ್ಶಿಯವರಿಗೆ, ವಿಧಾನಸೌಧ.
4. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಯವರ ಆಪ್ತ ಸಹಾಯಕರು,ಆಹಾರ,ನಾಗರಿಕ ಸರಬರಾಜು ಮತ್ತು ಗ್ರಾಹಕರ ವ್ಯವಹಾರಗಳ ಹಾಗೂ ಕಾನೂನು ಮಾಪನಶಾಸ್ತ್ರ ಇಲಾಖೆ, ವಿಕಾಸಸೌಧ.
5. ಸರ್ಕಾರದ ಉಪ ಕಾರ್ಯದರ್ಶಿಯವರ ಆಪ್ತ ಸಹಾಯಕರು,ಆಹಾರ,ನಾಗರಿಕ ಸರಬರಾಜು ಮತ್ತು ಗ್ರಾಹಕರ ವ್ಯವಹಾರಗಳ ಹಾಗೂ ಕಾನೂನು ಮಾಪನಶಾಸ್ತ್ರ ಇಲಾಖೆ, ವಿಕಾಸಸೌಧ.
6. ಶಾಖಾ ರಕ್ಷಾ ಕಡತ

Scanned with CamScanner

ಕರ್ನಾಟಕ ಸರ್ಕಾರ

ಕಾನೂನು ಮಾಪನಶಾಸ್ತ್ರ ಇಲಾಖೆ

ಸಂಖ್ಯೆ:ಕಾಮಾಇ/ಸನಿತಾ/ಸಿಆರ್-76/94-95.

ಕಾನೂನು ಮಾಪನಶಾಸ್ತ್ರ ನಿಯಂತ್ರಕರ ಕಛೇರಿ,
ನಂ.1, ಅಲಿ ಆಸ್ಕರ್ ರಸ್ತೆ, ಪಿ.ಬಿ.ನಂ.175,
ಬೆಂಗಳೂರು, ದಿನಾಂಕ: 7/6/2007

ವಿಷಯ: ದಿನಾಂಕ: 01-08-94ರ ಪೂರ್ವದ ದುರಸ್ತಿದಾರರುಗಳು ಸ್ಕಿಲ್ಡ್ ವರ್ಕರ್ ಪ್ರಮಾಣ ಪತ್ರ ಪಡೆಯುವುದರಿಂದ ವಿನಾಯಿತಿ ನೀಡುವ ಬಗ್ಗೆ ಹಾಗೂ ದಿನಾಂಕ: 25-05-2006ರ ಪೂರ್ವದಲ್ಲಿ ಸ್ಕಿಲ್ಡ್ ವರ್ಕರ್ ಪ್ರಮಾಣ ಪತ್ರ ಪಡೆದಿರುವವರಿಗೆ ದುರಸ್ತಿ ಅನುಜ್ಞಾ ಪತ್ರ ನೀಡುವ ಬಗ್ಗೆ.

ಉಲ್ಲೇಖ: 1) ಕೇಂದ್ರ ಕಛೇರಿ ಆದೇಶ ಸಂಖ್ಯೆ: ಕಾಮಾಇ/ಸನಿತಾ/ಸಿಆರ್-76/94-95, ದಿನಾಂಕ: 12-08-2004.

2) ಕೇಂದ್ರ ಕಛೇರಿ ಆದೇಶ ಸಂಖ್ಯೆ: ಕಾಮಾಇ/ಸನಿತಾ/ಸಿಆರ್-20/06-07, ದಿನಾಂಕ: 25-05-2006.

**********

ಪ್ರಸ್ತಾವನೆ:

ಕೇಂದ್ರ ಕಛೇರಿ ಅಧಿಸೂಚನೆ ಸಂಖ್ಯೆ: ಸಿಬ್ಬಂದಿ/ಎಸಿಟಿ/ಸಿಆರ್-17/94-95, ದಿನಾಂಕ: 01-08-94ರಲ್ಲಿ ದುರಸ್ತಿ ಲೈಸೆನ್ಸ್ ಪಡೆಯಬೇಕಾದಲ್ಲಿ ಸ್ಕಿಲ್ಡ್ ವರ್ಕರ್ ಪ್ರಮಾಣ ಪತ್ರ ಹೊಂದಬೇಕೆಂಬ ನಿಬಂಧನ ವಿಧಿಸಿದ್ದು, ಇದನ್ನು ಪ್ರಶ್ನಿಸಿ ಕರ್ನಾಟಕ ತೂಕ ಮತ್ತು ಅಳತೆ ಲೈಸೆನ್ಸ್ ಹೋಲ್ಡರ್ಸ್ ಅಸೋಸಿಯೇಷನ್, ಬೆಂಗಳೂರು ಇವರು ಕರ್ನಾಟಕ ಉಚ್ಚ ನ್ಯಾಯಾಲಯದಲ್ಲಿ ಅರ್ಜಿ ಸಂಖ್ಯೆ: 24497/94ರಲ್ಲಿ ಪ್ರಶ್ನಿಸಿದ್ದು, ಈ ರಿಟ್ ಅರ್ಜಿ ಸಂಬಂಧ ಮಾನ್ಯ ಉಚ್ಚ ನ್ಯಾಯಾಲಯದ ಆದೇಶದ ಹಿನ್ನೆಲೆಯಲ್ಲಿ ಮತ್ತು ಉಲ್ಲೇಖ (2)ರಲ್ಲಿನ ಆದೇಶದಲ್ಲಿ ಈ ಕಛೇರಿ ಅಧಿಸೂಚನೆ ದಿನಾಂಕ 01-08-94ನ್ನು ಸ್ಥಿರೀಕರಿಸಲಾಗಿತ್ತು. ಈ ಅಧಿಸೂಚನೆಯಲ್ಲಿ ದಿನಾಂಕ: 01-08-94ಕ್ಕಿಂತ ಪೂರ್ವದಲ್ಲಿ ದುರಸ್ತಿ ಲೈಸೆನ್ಸ್ ಹೊಂದಿರುವವರು ಸಹ ಸ್ಕಿಲ್ಡ್ ವರ್ಕರ್ ಪ್ರಮಾಣ ಪತ್ರ ಪಡೆಯುವುದು ಕಡ್ಡಾಯವೆಂದು ತಿಳಿಸಲಾಗಿತ್ತು. ನಂತರ ಈ ಕಛೇರಿ ಆದೇಶ ಸಂಖ್ಯೆ:ಕಾಮಾಇ/ಸನಿತಾ/ಸಿಆರ್-20/06-07, ದಿನಾಂಕ: 25-05-2006ರಲ್ಲಿ ಸ್ಕಿಲ್ಡ್ ವರ್ಕರ್ ಪ್ರಮಾಣ ಪತ್ರ ಪಡೆಯಲು ವಿದ್ಯಾರ್ಹತೆ ನಿಗದಿಪಡಿಸಲಾಯಿತು. ಈ ಹಿನ್ನೆಲೆಯಲ್ಲಿ ದಿನಾಂಕ: 01-08-94ಕ್ಕಿಂತ ಪೂರ್ವದಲ್ಲಿನ ದುರಸ್ತಿದಾರರು ಸ್ಕಿಲ್ಡ್ ವರ್ಕರ್ ಪ್ರಮಾಣ ಪತ್ರ ಪಡೆಯುವ ಬಗ್ಗೆ ಇಲಾಖಾ ಅಧಿಕಾರಿಗಳು ಮಾರ್ಗದರ್ಶನ ಕೋರಿರುತ್ತಾರೆ. ದಿನಾಂಕ: 25-05-2006ರ ಈ ಕಛೇರಿ ಆದೇಶದಲ್ಲಿ ಸ್ಕಿಲ್ಡ್ ವರ್ಕರ್ ಪ್ರಮಾಣ ಪತ್ರ ಪಡೆಯಲು ವಿದ್ಯಾರ್ಹತೆ ನಿಗದಿ ಪಡಿಸಿದ್ದು, ದಿನಾಂಕ: 25-05-2006ಕ್ಕಿಂತ ಪೂರ್ವದಲ್ಲಿ ಈ ವಿದ್ಯಾರ್ಹತೆ ಹೊಂದದ ಸ್ಕಿಲ್ಡ್ ವರ್ಕರ್ ಪ್ರಮಾಣ ಪತ್ರ ಪಡೆದಿರುವವರಿಗೆ ಅವರು ಸ್ಕಿಲ್ಡ್ ವರ್ಕರ್ ಪ್ರಮಾಣ ಪತ್ರ ಪಡೆದಿರುವ ಸಂದರ್ಭಗಳಿಗೆ ದುರಸ್ತಿ ಅನುಜ್ಞಾ ಪತ್ರ ನೀಡಬೇಕೆ ಬೇಡವೇ ಎಂಬ ಬಗ್ಗೆಯು ಸಹ ಗೊಂದಲವಿದ್ದ ಕಾರಣ ಈ ವಿಷಯಗಳಲ್ಲಿ ಇಲಾಖೆಯ ಕ್ಷೇತ್ರಾಧಿಕಾರಿಗಳು ಹಾಗೂ ದುರಸ್ತಿದಾರರ ಸಂಘದ ಪದಾಧಿಕಾರಿಗಳೊಂದಿಗೆ ಚರ್ಚಿಸಿ, ಅವರ ಅನಿಸಿಕೆಗಳನ್ನು ಪಡೆದು, ನಂತರ ನಿಮ್ಮ ಸ್ಪಷ್ಟ ಅಭಿಪ್ರಾಯದೊಂದಿಗೆ ಶಿಫಾರಸ್ಸುಗಳನ್ನು ಸಲ್ಲಿಸುವಂತೆ ಎಲ್ಲಾ

ಉಪ ನಿಯಂತ್ರಕರುಗಳಿಗೆ ಈ ಕಛೇರಿ ಪತ್ರ ದಿನಾಂಕ: 02-12-2006ರಲ್ಲಿ ತಿಳಿಸಲಾಗಿತ್ತು. ಅದರಂತೆ ಎಲ್ಲಾ ಉಪ
ನಿಯಂತ್ರಕರುಗಳು ಲಿಖಿತ ರೂಪದಲ್ಲಿ ಅವರ ಅಭಿಪ್ರಾಯಗಳನ್ನು ಸಲ್ಲಿಸಿರುತ್ತಾರೆ. ಅಲ್ಲದೆ ಈ ಸಂಬಂಧ ದಿನಾಂಕ:
13-03-2007ರಂದು ನಡೆದ ಉಪ ನಿಯಂತ್ರಕರುಗಳ ಸಭೆಯಲ್ಲಿ ಸಹ ಸುದೀರ್ಘವಾಗಿ ಚರ್ಚಿಸಲಾಗಿರುತ್ತದೆ.
ದಿನಾಂಕ:01-08-94ಕ್ಕಿಂತ ಪೂರ್ವದಲ್ಲಿ ದುರಸ್ತಿ ಅನುಜ್ಞಾಪತ್ರ ಹೊಂದಿರುವವರು ಈಗಾಗಲೇ ದುರಸ್ತಿ ಅನುಜ್ಞಾ
ಪತ್ರ ಹೊಂದಿ ದುರಸ್ತಿ ಕಾರ್ಯ ನಿರ್ವಹಿಸುತ್ತಿರುವ ಕಾರಣ ಈ ಹಂತದಲ್ಲಿ ಸ್ಕಿಲ್ಡ್ ವರ್ಕರ್ ಪ್ರಮಾಣ ಪತ್ರ ಪಡೆಯುವ
ಅವಶ್ಯಕತೆ ಇಲ್ಲವೆಂದು ಎಲ್ಲಾ ಉಪ ನಿಯಂತ್ರಕರುಗಳು ಅವರ ಅಭಿಪ್ರಾಯಗಳನ್ನು ತಿಳಿಸಿದ್ದು, ದಿನಾಂಕ:
01-08-94ಕ್ಕಿಂತ ಪೂರ್ವದಲ್ಲಿ ದುರಸ್ತಿ ಅನುಜ್ಞಾಪತ್ರ ಹೊಂದಿರುವವರಿಗೆ ಸ್ಕಿಲ್ಡ್ ವರ್ಕರ್ ಪ್ರಮಾಣ ಪತ್ರ ಪಡೆಯು
ವುದರಿಂದ ವಿನಾಯ್ತಿ ನೀಡಿ, ಈ ವಿನಾಯಿತಿಯನ್ನು ಮೆಕ್ಯಾನಿಕಲ್ ತೂಕದ ಸಾಧನಗಳಿಗೆ ಮಾತ್ರ ಸೀಮಿತಗೊಳಿಸಿ,
ಈಗಾಗಲೇ ಈ ಕಛೇರಿ ಪತ್ರ ಸಂಖ್ಯೆ:ಕಾಮಾಇ/ಸನಿತಾ/ಸಿಆರ್-264/03-04, ದಿನಾಂಕ:08-09-2003ರಲ್ಲಿ
ತಿಳಿಸಿರುವಂತೆ ವಿದ್ಯುನ್ಮಾನ ತೂಕದ ಸಾಧನಗಳ ದುರಸ್ತಿಗೆ ದಿನಾಂಕ: 25-05-2006ರಲ್ಲಿನ ಆದೇಶಕ್ಕನುಗುಣವಾಗಿ
ಸ್ಕಿಲ್ಡ್ ವರ್ಕರ್ ಪ್ರಮಾಣ ಪತ್ರ ಪಡೆಯುವುದು ಕಡ್ಡಾಯ ಮಾಡಬೇಕೆಂದು ಸಭೆಯಲ್ಲಿ ತೀರ್ಮಾನಿಸಲಾಯಿತು.

ದಿನಾಂಕ: 25-05-2006ಕ್ಕಿಂತ ಪೂರ್ವದಲ್ಲಿ ದಿನಾಂಕ: 25-05-2006ರಲ್ಲಿ ನಿಗದಿಪಡಿಸಿದ ವಿದ್ಯಾರ್ಹತೆ
ಹೊಂದದೆ ಸ್ಕಿಲ್ಡ್ ವರ್ಕರ್ ಪ್ರಮಾಣ ಪತ್ರ ಪಡೆದಿರುವವರಿಗೆ ಅವರು ಸ್ಕಿಲ್ಡ್ ವರ್ಕರ್ ಪ್ರಮಾಣ ಪತ್ರ ಪಡೆದಿರುವ
ಸಾಧನಗಳಿಗೆ ದುರಸ್ತಿ ಅನುಜ್ಞಾಪತ್ರ ನೀಡುವ ಬಗ್ಗೆ ಸಹ ಎಲ್ಲಾ ಉಪ ನಿಯಂತ್ರಕರುಗಳು ವರದಿ ಸಲ್ಲಿಸಿದ್ದು, ದಿನಾಂಕ:
25-05-2006ಕ್ಕಿಂತ ಪೂರ್ವದಲ್ಲಿ ಸ್ಕಿಲ್ಡ್ ವರ್ಕರ್ ಪ್ರಮಾಣ ಪತ್ರ ಪಡೆದಿರುವವರಿಗೆ ದುರಸ್ತಿ ಅನುಜ್ಞಾಪತ್ರ
ನೀಡಬಹುದೆಂದು ಶಿಫಾರಸ್ಸು ಮಾಡಿರುತ್ತಾರೆ. ಈ ಬಗ್ಗೆ ದಿನಾಂಕ: 13-03-2007ರ ಸಭೆಯಲ್ಲಿ ಚರ್ಚಿಸಿದ್ದು,
ದಿನಾಂಕ: 25-05-2006ಕ್ಕಿಂತ ಪೂರ್ವದಲ್ಲಿ ಸ್ಕಿಲ್ಡ್ ವರ್ಕರ್ ಪ್ರಮಾಣ ಪತ್ರ ಪಡೆದವರಿಗೆ ದಿನಾಂಕ:
25-05-2006ರ ಆದೇಶದಲ್ಲಿ ನಿಗದಿಪಡಿಸಿರುವ ವಿದ್ಯಾರ್ಹತೆ ಷರತ್ತು ಅನ್ವಯಿಸುವುದು ಸರಿಯಲ್ಲವಾದ್ದರಿಂದ ಈ
ಬದಲಾವಣೆ ಅವಧಿಯಲ್ಲಿ ( Traninsition period) ಸ್ಕಿಲ್ಡ್ ವರ್ಕರ್ ಪ್ರಮಾಣ ಪತ್ರ ಪಡೆದಿರುವುದರಿಂದ ಇದೊಂದು
ವಿಶೇಷ ಪ್ರಕರಣವೆಂದು ಪರಿಗಣಿಸಿ ಇಂತಹವರಿಗೆ ದುರಸ್ತಿ ಅನುಜ್ಞಾಪತ್ರ ನೀಡಲು ತೀರ್ಮಾನಿಸಲಾಗಿದ್ದು, ಸಭೆಯಲ್ಲಿ
ಚರ್ಚಿಸಿ ತೀರ್ಮಾನಿಸಿದಂತೆ ಈ ಎರಡು ವಿಚಾರಗಳಲ್ಲಿ ಕೆಳಗಿನಂತೆ ಆದೇಶ ಹೊರಡಿಸಲಾಗಿದೆ.

## ಆದೇಶ

ಪ್ರಸ್ತಾವನೆಯಲ್ಲಿ ವಿವರವಾಗಿ ಪ್ರಸ್ತಾಪಿಸಿರುವ ಹಿನ್ನಲೆಯಲ್ಲಿ ದಿನಾಂಕ: 01-08-94ಕ್ಕಿಂತ ಪೂರ್ವದಲ್ಲಿ
ದುರಸ್ತಿ ಅನುಜ್ಞಾಪತ್ರ ಹೊಂದಿರುವವರು ಸ್ಕಿಲ್ಡ್ ವರ್ಕರ್ ಪ್ರಮಾಣ ಪತ್ರ ಪಡೆಯುವುದರಿಂದ ವಿನಾಯಿತಿ ನೀಡಲಾಗಿದೆ.
ಆದರೆ ಈ ವಿನಾಯಿತಿ ಕೇವಲ ಮೆಕ್ಯಾನಿಕಲ್ ತೂಕದ ಸಾಧನಗಳಿಗೆ ಮಾತ್ರ ಸೀಮಿತವಾಗಿದ್ದು, ಈ ಕಛೇರಿ ಪತ್ರ ಸಂಖ್ಯೆ
ಕಾಮಾಇ/ಸನಿತಾ/ಸಿಆರ್-264/03-04, ದಿನಾಂಕ: 08-09-2003ರಲ್ಲಿ ತಿಳಿಸಿರುವಂತೆ ವಿದ್ಯುನ್ಮಾನ ತೂಕದ
ಸಾಧನಗಳ ದುರಸ್ತಿಗೆ ದಿನಾಂಕ: 25-05-2006ರ ಆದೇಶಕ್ಕನುಗುಣವಾಗಿ ಸ್ಕಿಲ್ಡ್ ವರ್ಕರ್ ಪ್ರಮಾಣ ಪತ್ರ

ಪಡೆಯುವುದು ಕಡ್ಡಾಯವಾಗಿರುತ್ತದೆ. ದಿನಾಂಕ 25-05-2006ಕ್ಕಿಂತ ಪೂರ್ವದಲ್ಲಿ ಸ್ಕಿಲ್ಡ್ ವರ್ಕರ್ ಪ್ರಮಾಣ ಪತ್ರ ಪಡೆದಿರುವವರಿಗೆ ದಿನಾಂಕ:25-05-2006ರಲ್ಲಿನ ಆದೇಶದಲ್ಲಿ ನಿಗದಿಪಡಿಸಿರುವ ವಿದ್ಯಾರ್ಹತೆ, ಷರತ್ತು ಅನ್ವಯಿಸುವುದು ಸರಿಯಲ್ಲವಾದ್ದರಿಂದ ಈ ಬದಲಾವಣೆಯ ಕಾಲ (Traninsition period)ದಲ್ಲಿ ಸ್ಕಿಲ್ಡ್ ವರ್ಕರ್ ಪ್ರಮಾಣ ಪತ್ರ ಪಡೆದಿರುವುದರಿಂದ ಇದೊಂದು ವಿಶೇಷ ಪ್ರಕರಣವೆಂದು ಪರಿಗಣಿಸಿ ಅಂತಹವರಿಗೆ ದುರಸ್ತಿ ಅನುಜ್ಞಾಪತ್ರ ನೀಡಲು ಹಾಗೂ ದುರಸ್ತಿ ಅನುಜ್ಞಾಪತ್ರ ಹೊಂದಿ ಹೊಸ ಸಾಧನಗಳಿಗೆ ಸ್ಕಿಲ್ಡ್ ವರ್ಕರ್ ಪ್ರಮಾಣ ಪತ್ರ ಪಡೆದಿದ್ದಲ್ಲಿ ಅಂತಹ ಸಾಧನಗಳ ದುರಸ್ತಿಯನ್ನು ದುರಸ್ತಿ ಅನುಜ್ಞಾಪತ್ರದಲ್ಲಿ ಸೇರ್ಪಡೆ ಮಾಡಲು ಆದೇಶಿಸಲಾಗಿದೆ.

ಕಾನೂನು ಮಾಪನಶಾಸ್ತ್ರ ನಿಯಂತ್ರಕರು.

ಗೆ,

1) ಎಲ್ಲಾ ಉಪ ನಿಯಂತ್ರಕರುಗಳಿಗೆ.
2) ಎಲ್ಲಾ ಸಹಾಯಕ ನಿಯಂತ್ರಕರುಗಳಿಗೆ.
3) ಎಲ್ಲಾ ನಿರೀಕ್ಷಕರುಗಳಿಗೆ.
4) ಕೇಂದ್ರ ಕಛೇರಿ ಎಲ್ಲಾ ಲೈಸೆನ್ಸ್ ಕಾರ್ಯನಿರ್ವಾಹಕರುಗಳಿಗೆ.
5) ಅಧೀಕ್ಷಕರು, ಆಪ್ತಶಾಖೆ, ರಕ್ಷತಾ ಕಡತ.
6) ಮ: ಕರ್ನಾಟಕ ಮೆಟ್ರಿಕ್ ಮನ್ಸ್ ಅಸೋಸಿಯೇಷನ್, ಬೆಂಗಳೂರು.
7) ಕರ್ನಾಟಕ ತೂಕ ಮತ್ತು ಅಳತೆ ಲೈಸೆನ್ಸ್ ಹೋಲ್ಡರ್ಸ್ ಅಸೋಸಿಯೇಷನ್, ಬೆಂಗಳೂರು.

ಜೆಬಿ:ಎಲ್.ಎಂ-7(171)